# ಹಳದಿ ಕತ್ತಿನ ಪಿಕಳಾರ







ಚಿತ್ರ– ಬರಹ:

**ದಿನೇಶ್ ಭಲವಾದಿ**

ಹಳದಿ ಕತ್ತಿನ ಪಿಕಳಾರ ಹಕ್ಕಿಯು ಮೈನಾ ಹಕ್ಕಿಗಿಂತ ಕೊಂಚ ಚಿಕ್ಕದು. ತಲೆಯಿಂದ ಕತ್ತಿನವರೆಗೂ ಅರಿಶಿಣ ಬಣ್ಣ, ಎದೆಯ ಭಾಗ ಬಿಳಿ ಬಣ್ಣ ಬೆನ್ನು ಮತ್ತು ರೆಕ್ಕೆಯು ಕಂದು ಬಣ್ಣ ಹೊಂದಿರುತ್ತದೆ. ಸಾಮಾನ್ಯವಾಗಿ ಜೋಡಿಯಲ್ಲಿ ಅಥವಾ ಗುಂಪುಗುಂಪಾಗಿ ಬೆಟ್ಟದ ಕಲ್ಲುಬಂಡೆಗಳ ಮಧ್ಯ ಇದರ ವಾಸ. ಕೆಮ್ಮೀಸೆ ಪಿಕಳಾರ, ಕೆಂಪುಬಾಲದ ಪಿಕಳಾರ, ಕರಿ ಪಿಕಳಾರ, ಬಿಳಿ ಹುಬ್ಬಿನ ಹಳದಿ ಪಿಕಳಾರ ಜಾತಿಗೆ ಸೇರಿದ ಹಾಗೂ ಇವೆಲ್ಲವುಗಳಿಗಿಂತ ವಿಶೇಷವಾದ ಹಕ್ಕಿಯಿದು.

ಮನುಷ್ಯನ ವಾಸ ಸ್ಥಾನದಿಂದ ತುಂಬ ದೂರ. ಚಿಕ್ಕ ಪುಟ್ಟ ಕೀಟಗಳು, ಚೆರ‍್ರಿ ಹಣ್ಣು ಹಾಗೂ ಇತರ ಸಣ್ಣ ಸಣ್ಣ ಹಣ್ಣುಗಳೇ ಆಹಾರ. ಗೂಡು ಕಟ್ಟುವ ಕಾಲ ಮೇ ತಿಂಗಳಿಂದ ಜುಲೈ ತಿಂಗಳು. ಕಲ್ಲು ಬಂಡೆಗಳ ಮಧ್ಯೆ ಬೆಳೆದ ಪೊದೆಗಳ ಒಳ ಭಾಗದಲ್ಲಿ ಗೂಡನ್ನು ನಿರ್ಮಿಸಿಕೊಳ್ಳುತ್ತವೆ. ಸಾಮಾನ್ಯವಾಗಿ 2ರಿಂದ 3 ಬಿಳಿ ಮೊಟ್ಟೆಗಳನ್ನು ಇಡುತ್ತವೆ.

ಕರ್ನಾಟಕದ ಬಳ್ಳಾರಿ, ಹಂಪಿಯ ಸುತ್ತಮುತ್ತ ಬಂಡೆಗಳು ಇರುವ ಪ್ರದೇಶ, ಚಿತ್ರದುರ್ಗದ ಬೆಟ್ಟಗಳು, ಬಿಳಿಗಿರಿ ರಂಗನ ಬೆಟ್ಟ ಹಾಗೂ ನಂದಿ ಬೆಟ್ಟಗಳಲ್ಲಿ ಮಾತ್ರ ಈ ಹಕ್ಕಿ ಕಾಣಸಿಗುತ್ತಿದೆ. ಇದರ ವಾಸಸ್ಥಾನವೇ ಬೆಟ್ಟದ ತುದಿ ಹಾಗೂ ಬಂಡೆಗಳ ಸಂದುಗೊಂದುಗಳು.

ಇತ್ತೀಚಿನ ದಿನಗಳಲ್ಲಿ ಇದರ ವಾಸಸ್ಥಾನ ಆಗಿರುವಂತಹ ಬಂಡೆಗಳನ್ನು ಡೈನಮೆಟ್ ಅಥವಾ ಸಿಡಿ ಮದ್ದುಗಳನ್ನು ಸಿಡಿಸಿ ಕಲ್ಲುಗಣಿ ಕೆಲಸ ಮಾಡುತ್ತಿರುವುದರಿಂದ ಈ ಹಕ್ಕಿ ಅಪಾಯದಂಚಿನಲ್ಲಿದೆ. ಜತೆಗೆ ಸ್ಥಳೀಯರು ಹುಲ್ಲು ಹೆಚ್ಚಾಗಿ ಬೆಳೆಯಲು ಪೊದೆಗಳಿಗೆ ಬೆಂಕಿಗಳನ್ನು ಇಡುತ್ತಿರುವುದರಿಂದಲೂ ಇದರ ವಾಸಸ್ಥಾನಕ್ಕೆ ಧಕ್ಕೆ ಉಂಟಾಗಿದೆ. ಮೇಲೆ ಸೂಚಿಸಿದ ಸ್ಥಳಗಳಲ್ಲೂ ಇತ್ತೀಚೆಗೆ ಈ ಹಕ್ಕಿ ಕಾಣಸಿಗುವುದು ಅಪರೂಪವಾಗಿದೆ. ಹೀಗಾಗಿಯೇ ಇದನ್ನು ನಶಿಸುತ್ತಿರುವ ಪಕ್ಷಿ ಸಂಕುಲದ ಪಟ್ಟಿಗೆ ಸೇರಿಸಲಾಗಿದೆ.